10

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ - ಆರ್ಥಿಕ ನೀತಿಗಳು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 13/10/20

## 73000 ಕೋಟಿ ಕೇಂದ್ರ ಪ್ಯಾಕೇಜ್

# ಆರ್ಥಿಕತೆಗೆ ಮಿನಿ ಟಾನಿಕ್

**1** ಸರ್ಕಾರಿ ನೌಕರರಿಗೆ ಎಲ್‌ಟಿಸಿ ನಗದು

**2** ಜೊತೆಗೆ ₹10000 ಹಬ್ಬದ ಮುಂಗಡ

**3** ರಾಜ್ಯಗಳಿಗೆ 12000 ಕೋಟಿ ರು. ಸಾಲ

**4** ಮೂಲಸೌಕರ್ಯಕ್ಕೆ 25000 ಕೋಟಿ

13/10/20

• **ಪಿಟಿಐ** ನವದೆಹಲಿ

ಕೊರೋನಾ ಲಾಕ್‌ಡೌನ್‌ನಿಂದ ತತ್ತರಿಸಿ ಇದೀಗ ನಿಧಾನವಾಗಿ ಚೇತರಿಸಿಕೊಳ್ಳುತ್ತಿರುವ ಆರ್ಥಿಕತೆಗೆ ಮತ್ತಷ್ಟು ಬಲ ತುಂಬಲು ಕೇಂದ್ರ ಸರ್ಕಾರ ಸೋಮವಾರ 73000 ಕೋಟಿ ರು. ಮೊತ್ತದ ಪ್ಯಾಕೇಜ್ ಘೋಷಿಸಿದೆ. ಸರ್ಕಾರಿ ನೌಕರರಿಗೆ ರಜೆ ಪ್ರವಾಸ ಭತ್ಯೆ (ಎಲ್‌ಟಿಸಿ)ಗೆ ಬದಲಾಗಿ ನಗದು ಪಾವತಿ, ಸರ್ಕಾರಿ ನೌಕರರಿಗೆ ಬಡ್ಡಿ ರಹಿತ 10 ಸಾವಿರ ರು. ಮುಂಗಡ ಸಾಲ, ಮೂಲಸೌಕರ್ಯ ವಲಯದಲ್ಲಿ ಹೆಚ್ಚುವರಿ 25 ಸಾವಿರ ಕೋಟಿ ರು. ಹೂಡಿಕೆ ಮತ್ತು ರಾಜ್ಯಗಳಿಗೆ 50 ವರ್ಷಗಳ ಕಾಲ ಬಡ್ಡಿ ರಹಿತವಾಗಿ 12 ಸಾವಿರ ಕೋಟಿ ರು. ಸಾಲ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದರು.

ಕೇಂದ್ರದ ಈ ಪ್ಯಾಕೇಜ್ ಅನ್ನು ಉದ್ಯಮ ವಲಯ ಮುಕ್ತಕಂಠದಿಂದ ಸ್ವಾಗತಿಸಿದೆ. ಮತ್ತೊಂದೆಡೆ ಸೂಕ್ತ ಸಮಯದಲ್ಲಿ ಕೈಗೊಂಡ ಈ ನಿರ್ಧಾರವು, ಆರ್ಥಿಕತೆಯಲ್ಲಿ ಹೊಸ ಬೇಡಿಕೆ ಸೃಷ್ಟಿಗೆ ಕಾರಣವಾಗಲಿದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜನರ ಕೈಗೆ ಅಧಿಕ ಹಣ ನೀಡಿ, ಅವರಿಂದ ವೆಚ್ಚ ಅಧಿಕವಾಗುವಂತೆ ಮಾಡುವ ಮೂಲಕ ಆರ್ಥಿಕತೆಗೆ ಚುರುಕು ನೀಡುವುದು ನಿರ್ಮಲಾ ಘೋಷಣೆಗಳ ಒಟ್ಟಾರೆ ಸಾರಾಂಶ. ಕಳೆದ ಮೇ ತಿಂಗಳಿನಲ್ಲಿ 20 ಲಕ್ಷ ಕೋಟಿ ರು. 'ಆತ್ಮನಿರ್ಭರ ಪ್ಯಾಕೇಜ್' ಅನ್ನು ಕೇಂದ್ರ ಪ್ರಕಟಿಸಿತ್ತು.

**ಎಲ್‌ಟಿಸಿ ಬದಲು ಕ್ಯಾಶ್:** ಕೇಂದ್ರ ಸರ್ಕಾರಿ ನೌಕರರಿಗೆ ಪ್ರತಿ 4 ವರ್ಷಕ್ಕೆ ರಜೆ ಪ್ರವಾಸ ಭತ್ಯೆ (ಎಲ್‌ಟಿಸಿ) ಲಭಿಸುತ್ತದೆ. ಒಮ್ಮೆ ಭಾರತದ ಎಲ್ಲಿಗೆ ಬೇಕಾದರೂ ಹೋಗಲು ಹಾಗೂ ಒಮ್ಮೆ ಸ್ವಂತ ಊರಿಗೆ ಹೋಗಲು ಅಥವಾ ಎರಡೂ ಬಾರಿಯೂ ಹುಟ್ಟೂರಿಗೆ ಹೋಗಿ ಬರಲು ಇದರಡಿ ಅವಕಾಶವಿರುತ್ತದೆ.

➘ 10



### 1 ಎಲ್‌ಟಿಸಿ ನಗದಿಗೆ

- ಶೇ.12 ಅಥವಾ ಅದಕ್ಕಿಂತ ಅಧಿಕ ಜಿಎಸ್‌ಟಿ ಹೊಂದಿರುವ ವಸ್ತು ಖರೀದಿಸಬೇಕು.
- ಜಿಎಸ್ಟಿ ನೋಂದಾಯಿತ ವ್ಯಾಪಾರಿಯಿಂದ ಡಿಜಿಟಲ್ ಸ್ವರೂಪದಲ್ಲೇ ಖರೀದಿ.
- ಖರೀದಿ ಮೌಲ್ಯವು ಪ್ರಯಾಣ ದರದ 3, ರಜೆ ಪಾವತಿ ಮೊತ್ತದ 1 ಪಟ್ಟು ಅಧಿಕವಾಗಿರಬೇಕು

### 2 ಹಬ್ಬದ ಮುಂಗಡಕ್ಕೆ

- ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳಿಗೆ ಯೋಜನೆ ಅವಕಾಶ
- ಮುಂಗಡ ಹಣ ಗರಿಷ್ಠ 10 ಕಂತಲ್ಲಿ ಮರುಪಾವತಿ ಕಡ್ಡಾಯ
- ಈ ಸಾಲದ ಹಣಕ್ಕೆ ಯಾವುದೇ ಬಡ್ಡಿ ಇರುವುದಿಲ್ಲ

### 3 ರಾಜ್ಯಗಳ ಸಾಲಕ್ಕೆ

- 2 ಕಂತಲ್ಲಿ ಸಾಲ ನೀಡಿಕೆ. ಮೊದಲ ಕಂತು ಬಳಕೆ ಬಳಿಕ 2ನೇ ಕಂತು ಬಿಡುಗಡೆ
- ಚಾಲ್ತಿ ಮತ್ತು ಹೊಸ ಯೋಜನೆಗಳಿಗೆ ಹಣ ಬಳಕೆಗೆ ಅವಕಾಶ
- 50 ವರ್ಷ ಬಳಿಕ ಒಂದೇ ಇಡುಗಂಟಲ್ಲಿ ಪೂರ್ಣ ಹಣ ಪಾವತಿ ಕಡ್ಡಾಯ